ಕರ್ನಾಟಕ ಸರ್ಕಾರ

**ಮಕ್ಕಳ ರಕ್ಷಣಾ ನಿರ್ದೇಶನಾಲಯ**

ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ, ಮೂರನೇ ಮಹಡಿ, ಡಾ|| ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560 001.
**E-mail ID: icps.kar@gmail.com**

ಸಂಖ್ಯೆ: ಐಸಿಪಿಎಸ್/ಜೆಸಿಎಲ್/ರಿಟ್ ಅರ್ಜಿ ಸಂ: 406/2013 ದಿನಾಂಕ: 19.03.2021

## : ಸುತ್ತೋಲೆ :

ವಿಷಯ: ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳಿಗೆ ಒದಗಿಸಬೇಕಾದ ಸೌಕರ್ಯಗಳ ಕುರಿತು.

ಉಲ್ಲೇಖ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 406/2013 ದಿನಾಂಕ: 15.09.2017ರ ಆದೇಶ ಕುರಿತು ದಿನಾಂಕ:15.03.2021ರಂದು ಮಾನ್ಯ ಉಚ್ಚ ನ್ಯಾಯಾಲಯದ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್‌ಅರ್ಜಿ ಸಂಖ್ಯೆ: 406/2013ರ ದಿನಾಂಕ: 15.09.2017ರಂದು ಆದೇಶವಾಗಿದ್ದು, ಸದರಿ ಆದೇಶದ ಕುರಿತು ಚರ್ಚಿಸಲು ದಿನಾಂಕ:15.03.2021ರಂದು ಮಾನ್ಯ ಉಚ್ಚನ್ಯಾಯಾಲಯದ ಸಮಿತಿಯು ಸಭೆ ಕರೆದಿದ್ದು, ಸದರಿ ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಅನುಸರಿಸಲು ನಿರ್ದೇಶಿಸಲಾಗಿದೆ.

ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗಿರುವ ಕಾನೂನು ಸಂಘರ್ಷಕ್ಕೆ ಒಳಗಾದಂತಹ ಮಕ್ಕಳುಗಳಿಗೆ ಕಡ್ಡಾಯವಾಗಿ ವಾರಕ್ಕೊಮ್ಮೆ ನುರಿತ ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಿಸುವುದು. ಸದರಿ ತಪಾಸಣಾ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ಒಂದು ದಾಖಲಾತಿ ಪುಸ್ತಕದಲ್ಲಿ (Register Book) ಭರ್ತಿಮಾಡುವುದು. ಸದರಿ ಪುಸ್ತಕಕ್ಕೆ ವೈದ್ಯರು ಹಾಗೂ ಸಂಬಂಧಪಟ್ಟ ಅಧೀಕ್ಷಕರು ತಪಾಸಣೆ ಮುಗಿದ ಕೂಡಲೇ ಅಂದೇ ತಮ್ಮ ಸಹಿಯೊಂದಿಗೆ ದೃಢೀಕರಿಸಬೇಕು.

ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗಿರುವ ಕಾನೂನು ಸಂಘರ್ಷಕ್ಕೆ ಒಳಗಾದಂತಹ ಮಕ್ಕಳುಗಳಿಗೆ ತಮ್ಮ ಕುಟುಂಬ ಸದಸ್ಯರುಗಳೊಂದಿಗೆ ಮಾತನಾಡಲು ದೂರವಾಣಿ ಸೌಲಭ್ಯ ಹಾಗೂ ವಿಡಿಯೋ ಕರೆ ಇತ್ಯಾದಿ ಸಂಪರ್ಕ ಸೌಲಭ್ಯಗಳನ್ನು ಒದಗಿಸುವುದು.

19.03.202

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು:

1. ಸದಸ್ಯಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಬೆಂಗಳೂರು ಇವರ ಮಾಹಿತಿಗಾಗಿ
2. ಅಧ್ಯಕ್ಷರು, ಬಾಲನ್ಯಾಯ ಮಂಡಳಿಗಳು, ಎಲ್ಲಾ ಜಿಲ್ಲೆಗಳು ಇವರುಗಳ ಮಾಹಿತಿಗಾಗಿ
3. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು ಸೂಕ್ತ ಕ್ರಮಕ್ಕಾಗಿ

# Register for Medical Check-up

| Sl. No | Name of the child | Age of the child | Date of admins ion to OH | Date of medical check-up conduct ed | Medical observation by the doctor (any wound observed, any disease, any medical problems etc,.) | Prescriptio n suggested if any | Remarks |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |

Sign & Seal by Doctor

Sign & Seal by Superindident